
ನಿಮ್ಮೊಡನೆ

# ಮಕ್ಕಳ ಬದುಕಿನ ಘನತೆ ಮುಕ್ಕಾಗಿಸದಿರೋಣ

**ಸಮಾಜಸೇವೆಯ ಹೆಸರಿನಲ್ಲಿ ನಾವು ಮಾಡುವ ಕೆಲಸಗಳು ಕೆಲವು ಸಂದರ್ಭದಲ್ಲಿ ಮತ್ತೊಬ್ಬರ ಭಾವನೆಗಳನ್ನು ಗಾಸಿಗೊಳಿಸಬಹುದು. ಮತ್ತೊಬ್ಬರಿಗೆ ಮಾಡುವ ಸಹಾಯವನ್ನು ಔದಾರ್ಯ ಎಂದು ಭಾವಿಸುವುದು ಅಥವಾ ಬಿಂಬಿಸಿಕೊಳ್ಳುವುದು ಕೂಡ ಕ್ರೌರ್ಯವೇ.**



ಈಶ್ವರ್

## ಮಾನವೀಯತೆ ಎಂದರೇನು?

ಅನಾಥ ಮಕ್ಕಳ ಮುಂದೆ ಪೋಷಕರು ತಮ್ಮ ಮಕ್ಕಳನ್ನು ಮುದ್ದಿಸದಿರುವ ಸೂಕ್ಷ್ಮ ಮನೋಭಾವವೇ ಮಾನವೀಯತೆ.

ಹೊಸಗನ್ನಡದ ಪ್ರಮುಖ ಲೇಖಕರಾದ ಎ.ಎನ್. ಮೂರ್ತಿರಾವ್ ಹಾಗೂ ಎಲ್.ಎಸ್. ಶೇಷಗಿರಿರಾವ್ ಅವರ ನಡುವೆ ನಡೆದ ಈ ಮಾತುಕತೆ, ಮಾನವೀಯತೆಯ ಕುರಿತ ವ್ಯಾಖ್ಯಾನ ಆಗಿರುವಂತೆಯೇ ತಿಳಿಯದೇ ಮಾಡುವ ತಪ್ಪುಗಳತ್ತ ನಮ್ಮ ಗಮನ ಸೆಳೆಯುವಂತೆಯೂ ಇದೆ.

ನಮ್ಮ ಮಕ್ಕಳನ್ನು ಮುದ್ದಿಸಲು ಯಾರ ಅಪ್ಪಣೆಯೂ ಬೇಕಿಲ್ಲ. ಆದರೆ, ಸಮಯ–ಸಂದರ್ಭದ ಅರಿವಿಲ್ಲದೆ ಹೋದರೆ ನಮ್ಮ ಮುದ್ದಾಟ ಮತ್ತೊಬ್ಬರ ಕಣ್ಣಿಗೆ ಕ್ರೌರ್ಯವಾಗಿ ಕಾಣಬಹುದು. ಅಪ್ಪ–ಅಮ್ಮನ ವಾತ್ಸಲ್ಯದಿಂದ ವಂಚಿತಗೊಂಡ ಮಗುವಿನ ಎದುರು ನಮ್ಮ ಮಕ್ಕಳನ್ನು ಕೊಂಡಾಡಿದರೆ, ಆ ಮಗುವಿನ ಮನಸ್ಸಿನಲ್ಲಿ ಮೂಡುವ ಭಾವನೆ ಎಂಥದಿರಬಹುದು? ಸರಳವಾಗಿ ಕಾಣಿಸುವ ಈ ಜಿಜ್ಞಾಸೆ, ನಮ್ಮ ವ್ಯಕ್ತಿತ್ವ–ಮನೋಧರ್ಮಕ್ಕೆ ಬೇಕಾದ ಸೂಕ್ಷ್ಮತೆಯನ್ನು ಸೂಚಿಸುವಂತಿದೆ. ಇಂಥದೊಂದು ಸೂಕ್ಷ್ಮ ಸ್ಪಂದನವನ್ನು, ಅನಾಥಾಶ್ರಮಗಳಲ್ಲಿ ಹೊರಗಿನವರು ಬಂದು ಹುಟ್ಟುಹಬ್ಬ ಸೇರಿದಂತೆ ವೈಯಕ್ತಿಕ ಆಚರಣೆಗಳನ್ನು ನಡೆಸುವುದನ್ನು ನಿರ್ಬಂಧಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಗುರ್ತಿಸಬಹುದು.

ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ವೃದ್ಧಾಶ್ರಮಗಳಿಗೆ ಹೋಗಿ ಮಕ್ಕಳ ಹುಟ್ಟುಹಬ್ಬ ಆಚರಿಸುವ ಪಾಲಕರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಇಂಥ ಆಚರಣೆಗಳನ್ನು ನಿರ್ಬಂಧಿಸಿ ಕರ್ನಾಟಕ ಸರ್ಕಾರದ 'ಮಕ್ಕಳ ರಕ್ಷಣಾ ನಿರ್ದೇಶನಾಲಯ' ಸುತ್ತೋಲೆ ಹೊರಡಿಸಿದೆ. ಸರ್ಕಾರಿ, ಸರ್ಕಾರಿ ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸಂಸ್ಥೆಯ ಸಿಬ್ಬಂದಿ, ಅಧಿಕಾರಿಗಳು, ಖಾಸಗಿ ಗಣ್ಯ ವ್ಯಕ್ತಿಗಳ ಹಾಗೂ ಅವರ ಮಕ್ಕಳ ಹುಟ್ಟುಹಬ್ಬ ಆಚರಣೆಗೆ ಇನ್ನು ಮುಂದೆ ಅವಕಾಶ ಇರುವುದಿಲ್ಲ. ಈ ಆದೇಶ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಅನ್ವಯಿಸುತ್ತದೆ.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಇರುವ ಮಕ್ಕಳ ಮನಸ್ಥಿತಿ ತುಂಬಾ ಸೂಕ್ಷ್ಮವಾಗಿರುತ್ತದೆ. ತಂದೆ ತಾಯಿಯರಿಂದ ತಿರಸ್ಕಾರಕ್ಕೆ ಒಳಗಾದ, ಲೈಂಗಿಕ ಶೋಷಣೆಗೆ ಗುರಿಯಾದ, ಬಾಲ್ಯ ವಿವಾಹಕ್ಕೆ ಒಳಗಾದ, ಭಿಕ್ಷಾಟನೆಯಲ್ಲಿ ತೊಡಗಿದ್ದ ಮತ್ತು ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದ – ಹೀಗೆ ವಿವಿಧ ಹಿನ್ನೆಲೆಯ ಮಕ್ಕಳು ಪಾಲನಾ ಸಂಸ್ಥೆಗಳಲ್ಲಿರುತ್ತಾರೆ. ಇಂಥ ಮಕ್ಕಳ ಎದುರು ಕುಟುಂಬದ ಸುರಕ್ಷತೆಯ ವಾತಾವರಣದಲ್ಲಿ ಬೆಚ್ಚಗಿರುವ ಎಳೆಯರು ಸಂಭ್ರಮದಿಂದ ಹುಟ್ಟುಹಬ್ಬ ಆಚರಿಸಿಕೊಳ್ಳುವುದು ಅಸೂಕ್ಷ್ಮವಾದ ನಡವಳಿಕೆ. ಈ ಆಚರಣೆಗಳು ದೀನದುರ್ಬಲರ ಎದುರು ಉಳ್ಳವರು ತಮ್ಮ ದೊಡ್ಡಸ್ತಿಕೆ ಪ್ರದರ್ಶಿಸಿದಂತಿರುತ್ತವೆ.

ಪಾಲನಾ ಸಂಸ್ಥೆಗಳಲ್ಲಿ ಇರುವವರು ಪೋಷಕರಿಂದ ದೂರವಾಗಿದ್ದರೂ, ಎಲ್ಲ ಮಕ್ಕಳಂತೆ ಅವರೂ ಆತ್ಮವಿಶ್ವಾಸ ಹಾಗೂ ಘನತೆಯ ಬಾಳಿಗಾಗಿ ಹಂಬಲಿಸುತ್ತಿರುತ್ತಾರೆ. ಆ ಆತ್ಮವಿಶ್ವಾಸಕ್ಕೆ ಪೆಟ್ಟುಕೊಡುವ ಉಳ್ಳವರ ಸಂಭ್ರಮದ ಆಚರಣೆಗಳು, ವಾತ್ಸಲ್ಯ ವಂಚಿತ ಮಕ್ಕಳಲ್ಲಿ ಕೀಳರಿಮೆಯನ್ನು ಹುಟ್ಟಿಸುವ ಸಾಧ್ಯತೆಯಿದೆ. ಹಾಗೆಂದು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುವ ಎಲ್ಲರ ಮನಸ್ಥಿತಿಯನ್ನೂ ಆಡಂಬರ ಅಥವಾ ಸೊಕ್ಕಿನ ಪ್ರದರ್ಶನ ಎಂದು ಭಾವಿಸಬೇಕಾಗಿಲ್ಲ. ತಮ್ಮ ಮಕ್ಕಳಿಗೆ ಸಮಾಜದ ಕಟು ವಾಸ್ತವಗಳನ್ನು ಪರಿಚಯಿಸುವ ಉದ್ದೇಶ ಕೆಲವು ಪಾಲಕರಿಗಿರುತ್ತದೆ. ಕುಟುಂಬದಿಂದ ದೂರವಾದ ಮಕ್ಕಳಿಗೆ ಸ್ವಾದಿಷ್ಟಕರ ತಿನಿಸು ಹಾಗೂ ಒಂದಿಷ್ಟು ಸಂತಸದ ಕ್ಷಣಗಳನ್ನು ಕಟ್ಟಿಕೊಡುವ ಆಶಯವೂ ಕೆಲವರದಾಗಿರುತ್ತದೆ. ಆದರೆ, ಸಮಾಜಸೇವೆಯ ಹೆಸರಿನಲ್ಲಿ ನಾವು ಮಾಡುವ ಕೆಲಸಗಳು ಕೆಲವು ಸಂದರ್ಭದಲ್ಲಿ ಮತ್ತೊಬ್ಬರ ಭಾವನೆಗಳನ್ನು ಗಾಸಿಗೊಳಿಸುವ ಚಟುವಟಿಕೆಗಳೂ ಆಗಿರುತ್ತವೆ. ಇಂಥ ಚಟುವಟಿಕೆಗಳು ಬಹುತೇಕ ಸಂದರ್ಭಗಳಲ್ಲಿ ಉದ್ದೇಶಪೂರ್ವಕ ಆಗಿರದೆ, ಅರಿವಿನ ಕೊರತೆಯ ಪ್ರತಿಫಲವಾಗಿರುತ್ತವೆ. ಆ ಅರಿವು ಮೂಡಿಸುವ ಕೆಲಸವನ್ನು ಪಾಲನಾ ಸಂಸ್ಥೆಗಳನ್ನು ನಿರ್ವಹಿಸುವವರು ಹಾಗೂ ಮಾಧ್ಯಮಗಳು ಮಾಡಬೇಕು.

ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳಿಗೆ ನೆರವಾಗಲಿಕ್ಕೆ ದಾರಿಗಳು ಸಾಕಷ್ಟಿವೆ. ಅಲ್ಲಿನ ಮೂಲಭೂತ ಸೌಕರ್ಯಗಳನ್ನು ಉತ್ತಮಗೊಳಿಸಲು ನೆರವಾಗಬಹುದು. ಮಕ್ಕಳ ಶೈಕ್ಷಣಿಕ ಕಲಿಕೆಗೆ ಅಗತ್ಯವಾದ ಅನುಕೂಲಗಳನ್ನು ಮಾಡಿಕೊಳ್ಳಬಹುದು. ಆದರೆ, ಇಂಥ ಕೆಲಸಗಳನ್ನು ಮಾಡುವಾಗ 'ಕೊಡು'ವ ಹಾಗೂ 'ತೆಗೆದುಕೊಳ್ಳು'ವ ಭಾವನೆ ಇಲ್ಲದಿರುವುದು ಅಗತ್ಯ. ಮಕ್ಕಳ ಪಾಲನಾ ಸಂಸ್ಥೆಗಳಂಥ ರಚನೆಗಳು ಸಮಾಜದಲ್ಲಿ ಅಸ್ತಿತ್ವದಲ್ಲಿರಲು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಎಲ್ಲರ ಪಾಲೂ ಇದೆ. ಹಾಗಾಗಿ, ಉತ್ತಮ ಸ್ಥಿತಿಯಲ್ಲಿರುವ ವ್ಯಕ್ತಿ ನೆರವಿನ ಅಗತ್ಯ ಇರುವವರಿಗೆ ಕೈಚಾಚುವುದು ಸಾಮಾಜಿಕ ಹೊಣೆಗಾರಿಕೆಯೂ ಹೌದು, ಪಾಪಪ್ರಜ್ಞೆಯನ್ನು ಕಡಿಮೆ ಮಾಡಿಕೊಳ್ಳುವ ದಾರಿಯೂ ಹೌದು. ಮತ್ತೊಬ್ಬರಿಗೆ ಮಾಡುವ ಸಹಾಯವನ್ನು ವ್ಯಕ್ತಿತ್ವದ ಔದಾರ್ಯ ಎಂದು ಭಾವಿಸುವುದು ಅಥವಾ ಬಿಂಬಿಸಿಕೊಳ್ಳುವುದು ಕೂಡ ಕ್ರೌರ್ಯವೇ.

■ ರಘುನಾಥ ಚ.ಹ.